KAMS510024612020

**ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ರವರ ನ್ಯಾಯಾಲಯ, ನಂಜನಗೂಡು.**

**ಉಪಸ್ಥಿತರುಃ ಶ್ರೀಮತಿ.ಸರಿತ ಕುಮಾರಿ.ಎ.ಎಂ.,**

ಬಿ.ಎ. ಎಲ್‌ಎಲ್.ಬಿ.,

**ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ನಂಜನಗೂಡು.**

**ದಿನಾಂಕಃ 20 ನೇ ಜುಲೈ, 2026**

**ಸಿ.ಸಿ./913/2020**

ಪಿರ್ಯಾದುದಾರರು ರಾಜ್ಯದ ಪರವಾಗಿ
ಕವಲಂದೆ ಠಾಣಾ ಪೊಲೀಸರು.
(ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು)

**ವಿರುದ್ಧ**

ಆರೋಪಿತರು

1. ನಾಗಮ್ಮ, ಬಿನ್ ಲೇ. ಕರಿಮಾದಶೆಟ್ಟಿ, 53 ವರ್ಷ
2. ಮಹದೇವಮ್ಮ, ಬಿನ್ ಲೇ. ಕರಿಮಾದಶೆಟ್ಟಿ, 55 ವರ್ಷ

ವಾಸಃ ತರದಲೆ ಗ್ರಾಮ, ನಂಜನಗೂಡು ತಾ.

(ಪ್ರತಿನಿಧಿಸುವವರುಃಆರೋಪಿತರ ಪರ **ಶ್ರೀ.ಪಿ.ಎಂ .,** ವಕೀಲರು)

# -:: ತೀರ್ಪು ::-

ಕವಲಂದೆ ಠಾಣಾ ಪೊಲೀಸರು ಈ ಮೊಕದ್ದಮೆಯನ್ನು ಆರೋಪಿತರ ವಿರುದ್ಧ ದಾಖಲು ಮಾಡಿ, ಆರೋಪಿತರು ಭಾರತ ದಂಡ ಸಂಹಿತೆಯ ಕಲಂ. 323,324,504 ಮತ್ತು 506 ಸಹವಾಚಕ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂದು ಆರೋಪಿಸಿರುತ್ತಾರೆ.

2. **ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆಃ-**

ದಿನಾಂಕ:-23.04.2020 ರಂದು ಸಂಜೆ 4.00 ಗಂಟೆ ಸಮಯದಲ್ಲಿ ಕವಲಂದೆ ಪೊಲೀಸ್ ಠಾಣೆ ಸರಹದ್ದು ತರದಲೆ ಗ್ರಾಮದ ಪಿರ್ಯಾದಿ ವಾಸದ ಮನೆಯ ಮುಂಭಾಗದ ಉಪ್ಪಾರಶೆಟ್ಟರ ಜನಾಂಗದ ಬೀದಿಯ ವರದರಾಜಸ್ವಾಮಿ ದೇವಸ್ಥಾನದ ಬಳಿ ಚಾಸಾ.1 ರವರಿಗೆ ಸೇರಿದ ಹುಲ್ಲಿನ ಮೆದೆಗೆ ಆರೋಪಿತರ ದನಗಳನ್ನು ಬಿಟ್ಟು ಮೇಯಿಸುತ್ತಿರುವಾಗ ಚಾಸಾ.1 ರವರು ಹೋಗಿ ಕೇಳಿದಾಗ ಆರೋಪಿತರು ಚಾಸಾ.1 ರವರಿಗೆ ಬೋಳಿಮಗಳೆ, ಸೂಳೆ ಎಂದು ಬೈಯುತ್ತಾ 2 ನೇ ಆರೋಪಿಯು ಚಾಸಾ.1 ರವರನ್ನು ಜಾಡಿಸಿ ತಳ್ಳಿದಾಗ ಚಾಸಾ.1 ರವರು ಕೆಳಗೆ ಬಿದ್ದಾಗ 1 ನೇ ಆರೋಪಿಯು ಮಚ್ಚಿನಿಂದ ಚಾಸಾ.1 ರವರ ಬಲದ ಕಾಲಿನ ಪಾದದ ಮೇಲ್ಬಾಗ ಹೊಡೆದ ಪರಿಣಾಮ ಚಾಸಾ.1 ರವರಿಗೆ "ಸಾಮಾನ್ಯ ಸ್ವರೂಪ"ದ ನೋವುಂಟಾಗಿರುವುದು ಹಾಗೂ ಚಾಸಾ.1 ರವರಿಗೆ 1 ನೇ ಆರೋಪಿಯು ಕೊಲೆ ಮಾಡುತ್ತೇನೆಂದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದು ಕವಲಂದೆ ಪೊಲೀಸ್ ಠಾಣೆಯ ಆರಕ್ಷಕ

ಉಪನಿರೀಕ್ಷಕರು ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

3. ದೋಷಾರೋಪಣೆ ಪತ್ರ ಸಲ್ಲಿಕೆಯಾದ ನಂತರದಲ್ಲಿ ನ್ಯಾಯಾಲಯವು ಭಾ.ದಂ.ಸಂಹಿತೆ ಕಲಂ. 323,324,504 ಮತ್ತು 506 ಸಹವಾಚಕ ಕಲಂ.34 ಕ್ಕೆ ಸಂಬಂಧಿಸಿದಂತೆ ಸಂಜ್ಞೆಯತೆಯನ್ನು ತೆಗೆದುಕೊಂಡಿರುತ್ತದೆ. ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ದೋಷಾರೋಪಣ ಪತ್ರ ಸಲ್ಲಿಕೆಯಾದ ನಂತರ ದಂಡ ಪ್ರಕ್ರಿಯಾ ಸಂಹಿತೆಯ ಕಲಂ.207 ರಡಿಯಲ್ಲಿ ಅವಶ್ಯವಿರುವ ಕಟ್ಲೆ ದಾಖಲೆಗಳನ್ನು ಆರೋಪಿತರಿಗೆ ಒದಗಿಸಲಾಯಿತು. ಅಭಿಯೋಜನೆ ಮತ್ತು ಆರೋಪಿತರ ಪರ ವಕೀಲರ ವಾದಗಳನ್ನು ಕೇಳಿದ ನಂತರ ದೋಷಾರೋಪಣೆಯನ್ನು ತಯಾರು ಮಾಡಿ ಆರೋಪಿತರಿಗೆ ಓದಿ ಹೇಳಲಾಯಿತು. ಆರೋಪಿತರು ತಾವು ತಪ್ಪು ಮಾಡಿಲ್ಲ ವಿಚಾರಣೆಯಾಗಬೇಕೆಂದು ಕೋರಿದ್ದರಿಂದ ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಳ್ಳಲಾಯಿತು.

4. ಅಭಿಯೋಜನೆಯವರ ಪರವಾಗಿ ದೋಷಾರೋಪಣಾ ಪತ್ರದಲ್ಲಿ ತೋರಿಸಿರುವ 10 ಜನ ಸಾಕ್ಷಿದಾರರ ಪೈಕಿ ಒಬ್ಬರು ಸಾಕ್ಷಿದಾರರನ್ನು ವಿಚಾರಿಸಿಕೊಂಡು, 3 ದಾಖಲಾತಿಗಳನ್ನು ನಿಶಾನೆಯಾಗಿ ಗುರುತಿಸಿಕೊಳ್ಳಲಾಗಿರುತ್ತದೆ.

5. ಸಾಕ್ಷ್ಯ ವಿಚಾರಣೆ ಮುಗಿದ ನಂತರದಲ್ಲಿ, ಆಪಾದಿತರ ವಿರುದ್ಧ ಆಪಾದಿಸುವಂತಹ ಯಾವುದೇ ಸಾಕ್ಷ್ಯ ಇರದ ಕಾರಣ ದಂ.ಪ್ರ.ಸಂಹಿತೆ ಕಲಂ.313 ರಡಿಯಲ್ಲಿ ಆರೋಪಿತರ ಹೇಳಿಕೆಯನ್ನು ಮನ್ನಾ ಮಾಡಲಾಯಿತು.

6. ಉಭಯ ಪಕ್ಷಗಾರರ ಪರ ವಾದ ಕೇಳಲಾಯಿತು.

7. ಆರೋಪಿತರು ಎಸಗಿದ್ದಾರೆ ಎನ್ನಲಾದ ಆರೋಪಗಳನ್ನು ರುಜುವಾತುಪಡಿಸಲು ಅಭಿಯೋಜನೆಯವರು ಈ ಕೆಳಕಂಡ ಅಂಶಗಳನ್ನು ರುಜುವಾತುಪಡಿಸಬೇಕಾಗಿದೆ.

**ಅಂಶಗಳು**

1. ದಿನಾಂಕ 23.04.2020 ರಂದು ಸಂಜೆ 4.00 ಗಂಟೆ ಸಮಯದಲ್ಲಿ ಕವಲಂದೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ತರದಲೆ ಗ್ರಾಮದ ಚಾಸಾ-1ರವರವಾಸದ ಮನೆಯ ಮುಂದೆ ಉಪ್ಪಾರಶೆಟ್ಟರ ಜನಾಂಗದ ಬೀದಿಯ ವರದರಾಜಸ್ವಾಮಿ ದೇವಸ್ಥಾನದ ಬಳಿ ಚಾಸಾ-1ರವರಿಗೆ ಸೇರಿದ ಹುಲ್ಲಿನ ಮೆದೆಗೆ ಆರೋಪಿತರುಗಳು ತಮ್ಮ ದನಗಳನ್ನು ಬಿಟ್ಟು ಮೇಯಿಸುತ್ತಿರುವಾಗ ಚಾಸಾ-1ರವರು ಹೋಗಿ ಕೇಳಿದ್ದಕ್ಕೆ ಆರೋಪಿತರುಗಳು ಅಪರಾಧವನ್ನು ಎಸಗುವ ಸಮಾನ ಉದ್ದೇಶಹೊಂದಿ ಬೋಳಿ ಮಗಳೇ, ಸೂಳೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಆ ಮೂಲಕ ಅವರಿಗೆ ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಶಾಂತಿ ಭಂಗ ಮಾಡಲಿ ಅಥವಾ ಇತರೆ ಯಾವುದೇ ಅಪರಾಧ ಮಾಡಲಿ ಎನ್ನುವ ಉದ್ದೇಶದಿಂದ ಅವರನ್ನು ಅವಮಾನಿಸಿರುತ್ತಾರೆ. ಆದ್ದರಿಂದ ಆರೋಪಿತರು ಭಾ.ದಂ.ಸಂ.ಕಲಂ.504 ಸಹವಾಚಕ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದನ್ನು ಅಭಿಯೋಜನೆಯವರು ರುಜುವಾತುಪಡಿಸುವರೇ ?

2. ಮೇಲ್ಕಂಡ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ, ಆರೋಪಿತರು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆ ಪೈಕಿ 2ನೇ ಆರೋಪಿಯು ಚಾಸಾ-1ರವರನ್ನು ಸ್ವಯಂ ಪ್ರೇರಿತವಾಗಿ

ಜಾಡಿಸಿ ತಳ್ಳಿದಾಗ ಚಾಸಾ-1ರವರು ಕೆಳಕ್ಕೆ ಬಿದ್ದಾಗ ಸಾಮಾನ್ಯ ಸ್ವರೂಪದ ನೋವುಂಟುಮಾಡಿರುತ್ತಾರೆ. ಆದ್ದರಿಂದ ಆರೋಪಿತರು ಭಾ.ದಂ.ಸಂ.ಕಲಂ.323 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದನ್ನು ಅಭಿಯೋಜನೆಯವರು ರುಜುವಾತುಪಡಿಸುವರೇ ?

3 ಮೇಲ್ಕಂಡ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ, ಆರೋಪಿತರು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆ ಪೈಕಿ 1ನೇ ಆರೋಪಿಯು ಮಚ್ಚಿನಿಂದ ಚಾಸಾ-1ರವರ ಬಲದ ಕಾಲಿನ ಪಾದದ ಮೇಲ್ಭಾಗ ಸ್ವಯಂ ಪ್ರೇರಿತವಾಗಿ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟುಮಾಡಿರುತ್ತಾರೆ. ಆದ್ದರಿಂದ ಆರೋಪಿತರು ಭಾ.ದಂ.ಸಂ.ಕಲಂ.324 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದನ್ನು ಅಭಿಯೋಜನೆಯವರು ರುಜುವಾತುಪಡಿಸುವರೇ ?

4 ಮೇಲ್ಕಂಡ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ, ಆರೋಪಿತರು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆ ಪೈಕಿ 1ನೇ ಆರೋಪಿಯು ಚಾಸಾ-1ರವರಿಗೆ ಕೊಲೆ ಮಾಡುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆಯನ್ನು ಉಂಟು ಮಾಡಿರುತ್ತಾರೆ. ಆದ್ದರಿಂದ ಆರೋಪಿತರು ಭಾ.ದಂ.ಸಂ.ಕಲಂ.506 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದನ್ನು ಅಭಿಯೋಜನೆಯವರು ರುಜುವಾತುಪಡಿಸುವರೇ ?

5 ಮಾಡುವ ಆದೇಶ ಏನು?

8. ಮೇಲಿನ ಅಂಶಗಳಿಗೆ ನಾನು ಈ ಕೆಳಗೆ ನೀಡಿರುವ ಕಾರಣಗಳಿಗಾಗಿ ಕೆಳಕಂಡಂತೆ ಉತ್ತರಿಸುತ್ತೇನೆ.

**ಅಂಶ-1 ರಿಂದ 4** **:ನಕಾರಾತ್ಮಕವಾಗಿ.**
**ಅಂಶ-5** **: ಅಂತಿಮ ಆದೇಶದಂತೆ.**
**ಈ ಕೆಳಕಂಡ ಕಾರಣಗಳಿಂದ:**

**ಕಾರಣಗಳು**

9. **ಅಂಶ 1 ರಿಂದ 4 :-** ಈ ಎಲ್ಲಾ ಅಂಶಗಳು ಒಂದೇ ಘಟನೆಯಲ್ಲಿ ನಡೆದ ಹಲವು ಅಪರಾಧಗಳಿಗೆ ಸಂಬಂಧಿಸಿದವುಗಳಾಗಿರುವುದರಿಂದಲೂ ಮತ್ತು ಅವುಗಳಿಗೆ ನೀಡಲಾಗುವ ಕಾರಣಗಳು ಪುನರಾವರ್ತನೆಯಾಗುವುದನ್ನು ತಡೆಯುವ ಸಲುವಾಗಿ ಅವುಗಳನ್ನು ಒಟ್ಟಿಗೆ ಚರ್ಚೆಗೆ ಎತ್ತಿಕೊಳ್ಳಲಾಗಿದೆ.

10. ದೋಷಾರೋಪಣಾ ಪತ್ರದಲ್ಲಿ ಚಾಸಾ-1 ರವರನ್ನು ಪ್ರಥಮ ವರ್ತಮಾನ ಹೇಳಿಕೆ ನೀಡಿದವರು ಮತ್ತು ಗಾಯಾಳು ಎಂದು ನಮೂದಿಸಲಾಗಿರುತ್ತದೆ. ಅಭಿಯೋಜನೆಯ ಪರವಾಗಿ ಚಾಸಾ-1 ರವರನ್ನು ಪ್ರಾಸಾ-1 ಎಂದು ವಿಚಾರಿಸಿಕೊಳ್ಳಲಾಗಿದ್ದು, ಪ್ರಾಸಾ-1 ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ಈ ಪ್ರಕರಣದ ಬಗ್ಗೆ ತನಗೇನೂ ಗೊತ್ತಿಲ್ಲ. ತಾನು ಪೊಲೀಸರಿಗೆ ದೂರು ಹಾಗೂ ಮರುಹೇಳಿಕೆ ನೀಡಿರುವುದಿಲ್ಲ ಮತ್ತು ಪೊಲೀಸರು ಯಾವುದೇ ಮಹಜರು ಜರುಗಿಸಿಲ್ಲ ಮತ್ತು ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಎಂದು ಸಾಕ್ಷ್ಯ

ನುಡಿದು ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿದಾರರಾಗಿ ಪರಿಣಮಿಸಿರುತ್ತಾರೆ.

11. ಪ್ರಾಸಾ-1 ರವರು ನಿಶಾನೆ ಪಿ-1 ಪ್ರಥಮ ವರ್ತಮಾನ ಹೇಳಿಕೆಯಲ್ಲಿನ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು, ಆದರೆ ಅದರಲ್ಲಿ ಬರೆದಿರುವ ವಿಚಾರಗಳು ತನಗೆ ತಿಳಿದಿಲ್ಲ ಎಂದು ಸಾಕ್ಷ್ಯ ನುಡಿದು ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿದಾರರಾಗಿ ಪರಿಣಮಿಸಿರುತ್ತಾರೆ.

12. ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ-1 ರವರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿದ್ದಾಗ್ಯೂ ಕೂಡ ಅವರಿಂದ ಅಭಿಯೋಜನಾ ಪ್ರಕರಣಕ್ಕೆ ಉಪಯುಕ್ತವಾಗುವಂತಹ ಯಾವುದೇ ಮಾಹಿತಿ ಹೊರಬಂದಿರುವುದಿಲ್ಲ. ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ-1 ರವರಿಗೆ ತಾವು ನಿಶಾನೆ ಪಿ-1 ರಂತೆ ಪೊಲೀಸರಿಗೆ ದೂರು ನೀಡಿದ್ದೀರಿ, ನಿಪಿ.2 ರಂತೆ ದಿ:20.05.2020 ರಂದು ನೀವು ಕೃತ್ಯ ನಡೆದ ಜಾಗವನ್ನ ತೋರಿಸಿಕೊಟ್ಟ ಮೇರೆಗೆ ಬೆಳಗ್ಗೆ 11.30 ರಿಂದ 12.15 ರವರೆಗೆ ಮಹಜರ್ ಜರುಗಿಸಿ ಮಚ್ಚನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಮತ್ತು ತಾವು ನಿಪಿ.3 ರಂತೆ ಪೊಲೀಸರಿಗೆ ಮರು ಹೇಳಿಕೆ ನೀಡಿರುತ್ತೀರಿ ಎಂದು ಮಾಡಿದ ಸಲಹೆಗಳನ್ನು ಪ್ರಾಸಾ-1 ರವರು ಸ್ಪಷ್ಟವಾಗಿ ನಿರಾಕರಿಸಿರುತ್ತಾರೆ. ಆದರೆ ಪ್ರಾಸಾ-1 ರವರು ತಮ್ಮ ಪಾಟೀ ಸವಾಲಿನಲ್ಲಿ ತಾನು ಮತ್ತು ಆರೋಪಿತರು ಪರಿಚಯಸ್ಥರು. ಈಗ ತಾನು ಮತ್ತು ಆರೋಪಿತರು ಗ್ರಾಮದ ಮತ್ತು ಕುಟುಂಬದ ಹಿರಿಯರ ಸಮಕ್ಷಮ ರಾಜೀ ಮಾಡಿಕೊಂಡಿದ್ದೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಆ ಕಾರಣದಿಂದಾಗಿ ಪ್ರಾಸಾ-1 ರವರು ಅಭಿಯೋಜನಾ ಪ್ರಕರಣವನ್ನು ಸಮರ್ಥಿಸಿ ಸಾಕ್ಷ್ಯ

ನುಡಿದಿಲ್ಲ ಎನ್ನಲಡ್ಡಿಯಿಲ್ಲ.

13. ಈ ಪ್ರಕರಣದಲ್ಲಿ ಪಿರ್ಯಾದಿ ಮತ್ತು ಗಾಯಾಳುವಾದ ಪ್ರಾಸಾ-1 ರವರು ಅಭಿಯೋಜನಾ ಪ್ರಕರಣವನ್ನು ಸಮರ್ಥಿಸಿ ಸಾಕ್ಷ್ಯ ನುಡಿಯದ ಹಿನ್ನೆಲೆಯಲ್ಲಿ ಇತರೆ ಸಾಕ್ಷಿದಾರರನ್ನು ವಿಚಾರಿಸಿಕೊಂಡಾಗ್ಯೂ ಕೂಡಾ ಯಾವುದೇ ಉದ್ದೇಶ ಈಡೇರುವುದಿಲ್ಲ ಎನ್ನುವ ಕಾರಣಕ್ಕೆ ಸಹಾಯಕ ಸರ್ಕಾರಿ ಅಭಿಯೋಜಕರು ಇತರೆ ಸಾಕ್ಷಿದಾರರಿಗೆ ಪ್ರೊಸೆಸ್ ನೀಡಬೇಕೆನ್ನುವ ಕೋರಿಕೆಯನ್ನು ತಿರಸ್ಕರಿಸಿ ಇತರೆ ಸಾಕ್ಷಿದಾರರನ್ನು ಸಾಕ್ಷ್ಯ ವಿಚಾರಣೆಯಿಂದ ಕೈಬಿಡಲಾಗಿರುತ್ತದೆ. ಒಟ್ಟಾರೆಯಾಗಿ ಅಭಿಯೋಜನಾ ಪ್ರಕರಣದ ಸಾಕ್ಷಿದಾರರ ಸಾಕ್ಷ್ಯದಲ್ಲಿ ಆರೋಪಿತರ ವಿರುದ್ಧ ಯಾವುದೇ ಆಪಾದನೆ ಇಲ್ಲದಿರುವುದರಿಂದ ಅವರುಗಳ ವಿರುದ್ಧ ಹೊರಿಸಲಾದ ದೋಷಾರೋಪಣೆಗಳನ್ನು ರುಜುವಾತುಪಡಿಸಲು ಅಭಿಯೋಜನೆಯವರು ವಿಫಲರಾಗಿರುತ್ತಾರೆಂದು ನಿರ್ಣಯಿಸಿ ಹೆಚ್ಚಿನ ಚರ್ಚೆಗೆ ಅವಕಾಶ ನೀಡದೇ **ಅಂಶ-1 ರಿಂದ 4 ನ್ನು ನಕಾರಾತ್ಮಕವಾಗಿ** ಉತ್ತರಿಸಿರುತ್ತೇನೆ.

14. **ಅಂಶ-5:-** ಈ ಮೇಲೆ ಚರ್ಚಿಸಿದ ಕಾರಣಗಳಿಗಾಗಿ ಅಭಿಯೋಜನೆಯವರು ಆರೋಪಿತರ ವಿರುದ್ಧ ಆಪಾದಿಸಲಾಗಿರುವಂತಹ ದೋಷಾರೋಪಣೆಗಳನ್ನು ರುಜುವಾತುಪಡಿಸಲು ವಿಫಲರಾಗಿರುವುದರಿಂದ ಈ ಕೆಳಕಂಡಂತೆ ಆದೇಶ ಮಾಡಿರುತ್ತೇನೆ.

**-:: ಆದೇಶ ::-**

ಆರೋಪಿತರನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರಡಿಯಲ್ಲಿ ಅವರ ವಿರುದ್ಧ ಹೊರಿಸಲಾದ ಭಾರತ ದಂಡ ಸಂಹಿತೆ ಕಲಂ. 323,324,504 ಮತ್ತು 506 ಸಹವಾಚಕ ಕಲಂ.34 ರಡಿಯಲ್ಲಿನ ದೋಷಾರೋಪಣೆಗಳಿಂದ **ಖುಲಾಸೆ ಮಾಡಿ ಬಿಡುಗಡೆ ಮಾಡಲಾಗಿದೆ.**

ಆರೋಪಿತರ ಮತ್ತು ಅವರಜಾಮೀನುದಾರರ ಜಾಮೀನು ಮುಚ್ಚಳಿಕೆಯು ದಂ.ಪ್ರ.ಸಂ.ಕಲಂ.437-ಎ ರಂತೆ ಮುಂದಿನ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತವೆ.

ಪಿ.ಎಫ್.ನಂ.56/2020(ಪಿ.ಆರ್.ಸಂಃ287/2022), ದಿಃ20.05.2020 ರ ಕ್ರಮ ಸಂಃ1 ರಲ್ಲಿ ನಮೂದಿಸಿರುವ ಕಬ್ಬಿಣದ ಮಚ್ಚನ್ನು ಮೇಲ್ಮನವಿ ಅವಧಿ ಮುಗಿದ ಮೇಲ್ಮನವಿ ನಂತರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕಚೇರಿಯವರಿಗೆ ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರ ಉಕ್ತಲೇಖನ ಕೊಟ್ಟು ಅವರಿಂದ ಬೆರಳಚ್ಚು ಮಾಡಿಸಿದ ನಂತರ ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ದಿಃ **20 ನೇ ಜುಲೈ, 2026** ರಂದು ಆದೇಶವನ್ನು ಘೋಷಿಸಲಾಯಿತು.)

**(ಶ್ರೀಮತಿ.ಸರಿತ ಕುಮಾರಿ.ಎ.ಎಂ.)**
ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು,
ನಂಜನಗೂಡು

## -ಅನುಬಂಧ-

1. **ಅಭಿಯೋಜನಾ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ**

ಪ್ರಾಸಾ-1 : ಕೆಂಪಮ್ಮ

2. **ಅಭಿಯೋಜನಾ ಪರ ಗುರುತಿಸಲಾದ ದಾಖಲೆಗಳುಃ**

ನಿಪಿ-1 : ದೂರು

ನಿಪಿ-2 : ಸ್ಥಳ ಮಹಜರ್

ನಿಪಿ-3 : ಪ್ರಾಸಾ.1 ರವರ ಮರುಹೇಳಿಕೆ

3. **ಅಭಿಯೋಜನಾ ಪರ ಗುರುತಿಸಲಾದ ಮುದ್ದೆಮಾಲುಗಳುಃ**

- ಇಲ್ಲಾ -

4. **ಆರೋಪಿತರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ.**

- ಇಲ್ಲಾ -

5. **ಆರೋಪಿತರ ಪರ ಗುರುತಿಸಲಾದ ದಾಖಲೆಗಳುಃ**

- ಇಲ್ಲಾ -

ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು,
ನಂಜನಗೂಡು.